ಸದರಿ ಆಸ್ಪತ್ರೆಯಲ್ಲಿ ಇರುವ ತಜ್ಞ ವೈದ್ಯರು ಮತ್ತು ಸಿಬ್ಬಂದಿಗಳಿಂದ ರೋಗಿಗಳಿಗೆ ಯಾವುದೇ ತೊಂದರೆಯಾಗದಂತೆ ಚಿಕಿತ್ಸೆ ನೀಡಲಾಗುತ್ತಿದೆ.

ಈ) ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಇಲಾಖೆಯಲ್ಲಿ ಖಾಲಿಯಿರುವ 983 ತಜ್ಞ ವೈದ್ಯರು, 331 ಸಾಮಾನ್ಯ ಕರ್ತವ್ಯ ವೈದ್ಯಾಧಿಕಾರಿ, 87 ದಂತ ಆರೋಗ್ಯಾಧಿಕಾರಿಗಳ ನೇಮಕಾತಿಯನ್ನು ವಿಶೇಷ ನಿಯಮಗಳನ್ನೂ ರೂಪಿಸಿ, ಯಾವುದೇ ಲಿಖಿತ ಪರೀಕ್ಷೆ ಹಾಗೂ ಮೌಖಿಕ ಸಂದರ್ಶನವಿಲ್ಲದೇ, ಅಭ್ಯರ್ಥಿಗಳು ಅರ್ಹತಾ ಪರೀಕ್ಷೆಯಲ್ಲಿ ಗಳಿಸಿದ ಅಂಕಗಳ ಆಧಾರದ ಮೇಲೆ ಅಯ್ಕೆ ಮಾಡುವ ಪ್ರಸ್ತಾವನೆಯನ್ನು ಕರ್ನಾಟಕ ಲೋಕಸೇವಾ ಆಯೋಗಕ್ಕೆ ಸಲ್ಲಿಸಲಾಗುತ್ತಿದೆ. ಆಯೋಗವು ಈ ವಿಶೇಷ ನಿಯಮಗಳ ರೀತ್ಯಾ 2–3 ತಿಂಗಳೊಳಗಾಗಿ ಆಯ್ಕೆ ಮಾಡಿ, ಆಯ್ಕೆ ಪಟ್ಟಿಯನ್ನು ಒದಗಿಸುವುದಾಗಿ ತಿಳಿಸಿರುತ್ತದೆ.

ಇಲಾಖೆಯಲ್ಲಿ ಖಾಲಿ ಇರುವ ಅರೆ ವೈದ್ಯಕೀಯ ಹುದ್ದೆಗಳನ್ನು ವಿಶೇಷ ನೇರ ನೇಮಕಾತಿ ಸಮಿತಿ ಮುಖಾಂತರ ನೇಮಕಾತಿ ಮಾಡುವ ಪ್ರಸ್ತಾವನೆ ಸರ್ಕಾರದ ತೀವ್ರ ಪರಿಶೀಲನೆಯಲ್ಲಿದೆ. ಪ್ರಸ್ತುತ 1582 ಗ್ರೂಪ್ "ಡಿ" ಹಾಗೂ 436 ವಾಹನಚಾಲಕರ ಹುದ್ದೆಗಳನ್ನು ನೇಮಕಾತಿ ಮಾಡುವ ಪ್ರಕ್ರಿಯೆ ಚಾಲನೆಯಲ್ಲಿರುತ್ತದೆ.

ಡೆಂಗೆ, ಚಿಕನ್‌ಗುನ್ಯಾ ಮತ್ತು ಮಲೇರಿಯಾ ನಿಯಂತ್ರಣ

537(512); ಶ್ರೀ ಗೋಪಾಲ ಪೂಜಾರಿ ಕೆ. (ಮಹಾಲಕ್ಷ್ಮಿ ಲೇಔಟ್)

ಅ) 2015ನೇ ಜನವರಿಯಿಂದ ಬೆಂಗಳೂರು ನಗರದಲ್ಲಿ ಎಷ್ಟು ಡೆಂಗೆ, ಚಿಕನ್ ಗುನ್ಯಾ ಹಾಗೂ ಮಲೇರಿಯಾ ಜ್ವರದ ಪ್ರಕರಣಗಳು ದಾಖಲಾಗಿದೆ; (ವಿಧಾನ ಸಭಾವಾರು ಮಾಹಿತಿ ನೀಡುವುದು);

ಆ) ಇದರಿಂದ ಎಷ್ಟು ಸಾವು ಸಂಭವಿಸಿದೆ;

ಇ) ಈ ರೋಗಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಕ್ರಮಗಳೇನು;

ಈ) ಬೆಂಗಳೂರು ನಗರದಲ್ಲಿ ಹೆಚ್ಚುತ್ತಿರುವ ಪ್ರಕರಣಗಳಿಂದಾಗಿ ಖಾಸಗಿ ವೈದ್ಯರ ಬಳಿ ಚಿಕಿತ್ಸೆ ಪಡೆಯುತ್ತಿರುವುದು ಸರ್ಕಾರದ ಗಮನಕ್ಕೆ ಬಂದಿದೆಯೇ;

ಉ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಎಷ್ಟು ಪ್ರಕರಣಗಳು ಪತ್ತೆಯಾಗಿವೆ;

ಊ) ಇವುಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಪರ್ಯಾಯ ವ್ಯವಸ್ಥೆ ಏನು?

ಶ್ರೀ ಯು.ಟಿ. ಖಾದರ್ (ಮಾನ್ಯ ಆರೋಗ್ಯ ಮತ್ತು ಕುಟುಂಬ ಕಲ್ಯಾಣ ಸಚಿವರು)

ಅ) ವಿವರಗಳನ್ನು **ಅನುಬಂಧ–1**ರಲ್ಲಿ ನೀಡಲಾಗಿದೆ.

ಆ) 2015ನೇ ಸಾಲಿನಲ್ಲಿ ಬೆಂಗಳೂರು ನಗರದಲ್ಲಿ ಡೆಂಗಿ, ಮತ್ತು ಮಲೇರಿಯಾ ಜ್ವರಗಳಿಂದ ಯಾವುದೇ ಮರಣ ಪ್ರಕರಣಗಳು ಸಂಭವಿಸಿರುವುದಿಲ್ಲ ಹಾಗೂ ಚಿಕನಗುನ್ಯಾ ಜ್ವರದಿಂದ ಮರಣ ಸಂಭವಿಸುವುದಿಲ್ಲ.

ಇ) ನಿಯಂತ್ರಿಸಲು ಕೈಗೊಂಡಿರುವ ಕ್ರಮದ ವಿವರಗಳನ್ನು **ಅನುಬಂಧ–2** ರಲ್ಲಿ ನೀಡಲಾಗಿದೆ.

ಈ) ಹೆಚ್ಚಿನ ಖಾಸಗಿ ಆಸ್ಪತ್ರೆಗಳು ವರದಿಗಳನ್ನು ಆನ್ ಲೈನ್ ಮುಖಾಂತರ ಪಾಲಿಕೆಗೆ ಸಲ್ಲಿಸುತ್ತಿದ್ದಾರೆ. ವಾರ್ಡವಾರು ನಿಯೋಜಿಸಿರುವ ಒಬ್ಬರು ಹಿರಿಯ ಆರೋಗ್ಯ ಪರಿವೀಕ್ಷಕರು ಮತ್ತು 4 ಜನ ಲಿಂಕ್ ವರ್ಕ್ಸ್ ಮುಖಾಂತರ ಇತರೆ ಆಸ್ಪತ್ರೆಗಳಿಂದ ಮಾಹಿತಿಗಳನ್ನು ಪಡೆಯಲು ಕ್ರಮ ಜರುಗಿಸಲಾಗಿದೆ.

ಉ) ಬೆಂಗಳೂರು ನಗರದ ವ್ಯಾಪ್ತಿಯಲ್ಲಿ ಜನವರಿ–2015 ರಿಂದ 27–06–2015ರವರೆಗೆ ಡೆಂಗಿ–370 ಚಿಕನ್‌ಗುನ್ಯಾ–114 ಮತ್ತು ಮಲೇರಿಯಾ–09 ಪ್ರಕರಣಗಳು ಪತ್ತೆಯಾಗಿವೆ.

ಊ) ಪರ್ಯಾಯ ವ್ಯವಸ್ಥೆಯ ವಿವರಗಳನ್ನು **ಅನುಬಂಧ–3**ರಲ್ಲಿ ನೀಡಲಾಗಿದೆ.

ಅನುಬಂಧ–1

2015ನೇ ಜನವರಿಯಿಂದ ಬೆಂಗಳೂರು ನಗರದಲ್ಲಿ ಒಟ್ಟು ಡೆಂಗಿ ಚಿಕುಂಗುನ್ಯಾ ಮತ್ತು ಮಲೇರಿಯಾ ಜ್ವರದ ಪ್ರಕರಣಗಳು ವಿಧಾನ ಸಭಾವರು ಮಾಹಿತಿಯನ್ನು ಅನುಬಂಧ–1ರಲ್ಲಿ ನೀಡಲಾಗಿದೆ.

ಜನವರಿ 2015 ರಿಂದ 27.6.2015ರವರೆಗೆ

ಕ್ರ ಸಂ	ವಿಧಾನ ಸಭಾ ಕ್ಷೇತ್ರ	ಡೆಂಗಿ	ಚಿಕುಂಗುನ್ಯ	ಮಲೇರಿಯಾ
1	ಮಲ್ಲೇಶ್ವರ	4	0	0
2	ಗಾಂಧೀನಗರ	2	0	0
3	ಮಹಾಲಕ್ಷ್ಮೀಪುರಂ	10	1	0
4	ರಾಜಾಜಿನಗರ	17	0	0
5	ಚಾಮರಾಜಪೇಟೆ	5	0	0
6	ಗೋವಿಂದರಾಜನಗರ	11	4	0
7	ವಿಜಯನಗರ	26	4	0
8	ಬಸವನಗುಡಿ	3	6	0
9	ಪದ್ಮನಾಭನಗರ	10	1	0
10	ಬಿ.ಟಿ.ಎಂ. ಲೇಔಟ್	5	0	0
11	ಜಯನಗರ	26	6	0
12	ಚಿಕ್ಕಪೇಟೆ	5	0	0
13	ಸಿ.ವಿ.ರಾಮನ್ ನಗರ	14	1	0
14	ಶಿವಾಜಿನಗರ	12	1	0
15	ಶಾಂತಿನಗರ	4	2	0
16	ಪುಲಿಕೇಶಿನಗರ	4	0	0
17	ಹೆಬ್ಬಾಳ	11	0	0
18	ಸರ್ವಜ್ಞನಗರ	6	1	0
19	ಬ್ಯಾಟರಾಯನಪುರ	3	3	0

20	ಯಲಹಂಕ	30	11	4
21	ರಾಜರಾಜೇಶ್ವರಿನಗರ	9	6	0
22	ಯಶವಂತಪುರ	5	0	0
23	ಮಹಾದೇವಪುರ	29	1	0
24	ಕೆ.ಆರ್.ಪುರಂ	6	0	0
25	ಬೊಮ್ಮನಹಳ್ಳಿ	4	8	0
26	ಬೆಂಗಳೂರು ದಕ್ಷಿಣ	27	12	2
27	ದಾಸರಹಳ್ಳಿ	18	0	0
28	ಆನೇಕಲ್	14	31	3
	ಇತರೆ	50	15	0
	ಒಟ್ಟು	370	114	9

ಅನುಬಂಧ–2

ಈ ರೋಗಗಳನ್ನು ನಿಯಂತ್ರಿಸಲು ಬೆಂಗಳೂರು ನಗರದಲ್ಲಿ ಸರ್ಕಾರ ಕೈಗೊಂಡ ಕ್ರಮಗಳ ವಿವರಗಳು

1. ಕೀಟ ಜನ್ಯ ರೋಗಗಳ Out Break Investigation ಗಾಗಿ ಜಿಲ್ಲಾ ವಿಚಕ್ಷಣಾಧಿಕಾರಿಗಳು, ಫಿಸಿಷಿಯನ್ ಹಾಗು ಪಿಡಿಯಾಟ್ರಿಶಿಯನ್‌ರನ್ನು ಒಳಗೊಂಡ Dist. Level Rapid Response Team ಅನ್ನು ರಚಿಸಿ ಕಾರ್ಯಪ್ರವೃತ್ತಗೊಳಿಸಲಾಗಿದೆ.

2. ಖಾಸಗಿ ಆಸ್ಪತ್ರೆಗಳಿಂದಲೂ ಸಹ ಸೀರಂ ಮಾದರಿಗಳನ್ನು ಖಚಿತ ಪರೀಕ್ಷೆಗಾಗಿ ಸೆಂಟಿನೆಲ್ ಲ್ಯಾಬ್‌ಗಳಿಗೆ ಕಳುಹಿಸಲು ಸೂಚಿಸಲಾಗಿದೆ.

3. ಖಾಸಗಿ ಆಸ್ಪತ್ರೆಗಳಿಂದ ದೈನಂದಿನ ವರದಿಯನ್ನು ಪಡೆಯುತ್ತಿದ್ದು, ಬೆಂಗಳೂರು ನಗರ ಜಿಲ್ಲೆ ವ್ಯಾಪ್ತಿಗೆ ಬರುವ ಪ್ರಕರಣಗಳನ್ನು ತಕ್ಷಣವೇ

ಸಂಬಂಧಪಟ್ಟ ಪ್ರಾಥಮಿಕ ಆರೋಗ್ಯ ಕೇಂದ್ರದ ಸಿಬ್ಬಂದಿ ಅನುಸರಣೆ (Follow up) ಮಾಡಿ ವರದಿ ನೀಡುತ್ತಾರೆ.

4. ಬೆಂಗಳೂರಿನ ವಿವಿಧ ಆಸ್ಪತ್ರೆಗಳಲ್ಲಿ ದೈನಂದಿನ Platelet ಲಭ್ಯತೆ ಕುರಿತ ಮಾಹಿತಿಯನ್ನು blood.kar.nic.in ನಲ್ಲಿ ಮಾಹಿತಿ ಪಡೆದು ಎಲ್ಲಾ ಆಸ್ಪತ್ರೆಗಳಿಗೆ ಈ–ಮೇಲ್ ಮೂಲಕ ಕಳುಹಿಸಲಾಗುತ್ತಿದೆ.

5. ನಿರ್ದೇಶನಾಲಯದ Dengue Protocol ಅನ್ನು ಎಲ್ಲಾ ಆಸ್ಪತ್ರೆಗಳಿಗೆ ಈ–ಮೇಲ್ ಮೂಲಕ ಕಳುಹಿಸಲಾಗಿದೆ.

6. ಶಂಕಿತ ಪ್ರಕರಣಗಳು ವರದಿಯಾದ ಗ್ರಾಮಗಳಲ್ಲಿ ಸ್ಥಳೀಯವಾಗಿ ಕ್ಲಿನಿಕ್ ನಡೆಸಲಾಗುತ್ತಿದೆ.

7. ಈಡಿಸ್ ಲಾರ್ವಾ ಸಮೀಕ್ಷೆಗಾಗಿ ತಾಲ್ಲೂಕು ಮಟ್ಟದಲ್ಲಿ ತಾಲ್ಲೂಕು ವೈದ್ಯಾಧಿಕಾರಿಗಳ ನೇತೃತ್ವದಲ್ಲಿ ಆರೋಗ್ಯ ಸಹಾಯಕರ ತ್ವರಿತ ಕ್ರಿಯಾ ತಂಡವನ್ನು ರಚಿಸಲಾಗಿದ್ದು, ಲಾರ್ವಾ ಸಮೀಕ್ಷೆ ನಡೆಸಲಾಗುತ್ತಿದೆ.

8. ಲಾರ್ವಾ ಸಮೀಕ್ಷೆ ಸಾರ್ವಜನಿಕರಿಗೆ ಅರಿವು ಮೂಡಿಸಲು Questionnaire ಬಳಸಲಾಗುತ್ತಿದೆ.

9. ಆರೋಗ್ಯ ಸಹಾಯಕರು ಪ್ರತಿ ದಿನ ತಲಾ 60 ಮನೆಗಳ ಲಾರ್ವಾ ಸಮೀಕ್ಷೆ ನಡೆಸಿ, ದೈನಂದಿನ ವರದಿಯನ್ನು ನೀಡುತ್ತಿದ್ದಾರೆ.

10. ಲಾರ್ವಾ ಸಮೀಕ್ಷೆ ಮಾಡುವ ಸಂದರ್ಭದಲ್ಲಿ ಮನೆಯವರ ಸಹಿಯನ್ನು ವರದಿ ನಮೂನೆಯಲ್ಲಿ ಪಡೆಯಲಾಗುತ್ತಿದೆ.

11. ಆರೋಗ್ಯ ಶಿಕ್ಷಣದನ್ವಯ ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿ ಲಾರ್ವಾ ಸಮೀಕ್ಷೆ ನಡೆಸಿ ಡೆಂಗೀ ನಿಯಂತ್ರಣ ಕುರಿತ ಕರ ಪತ್ರಗಳನ್ನು ಹಂಚಲಾಗಿದೆ. ಕರಪತ್ರಗಳನ್ನು ಪ್ರಮುಖ ಸ್ಥಳಗಳಾದ

ಶಾಲೆ, ಅಂಗನವಾಡಿ, ಬಸ್ ನಿಲ್ದಾಣ, ಅಂಗಡಿಗಳು, ದೇವಸ್ಥಾನಗಳ ಬಳಿ ಅಂಟಿಸಲಾಗಿದೆ.

12. ದಿನಾಂಕ 31.3.2015ರಂದು ಬೆಂಗಳೂರು ನಗರ ಜಿಲ್ಲಾ ಮಾನ್ಯ ಜಿಲ್ಲಾಧಿಕಾರಿಗಳ ಅಧ್ಯಕ್ಷತೆಯಲ್ಲಿ ಅಂತರ ಇಲಾಖಾ ಸಮನ್ವಯ ಸಮಿತಿ ಸಭೆಯಲ್ಲಿ ನಡೆಸಿ ಡೆಂಗೀ ನಿಯಂತ್ರಣದಲ್ಲಿ ಇತರ ಇಲಾಖೆಗಳ ಸಹಕಾರವನ್ನು ಕೋರಲಾಗಿದೆ.

13. ಡೆಂಗೀ ಹಾಗು ಚಿಕುಂಗುನ್ಯ ನಿಯಂತ್ರಣದ ಕುರಿತು ಗ್ರಾಮ ಪಂಚಾಯತ್ ಮಟ್ಟದಲ್ಲಿ ಅಡ್ವೊಕೆಸಿ ಕಾರ್ಯಾಗಾರಗಳನ್ನು ನಡೆಸಲಾಗುತ್ತಿದೆ. ಈ ವರೆಗೆ 15 ಗ್ರಾಮ ಪಂಚಾಯತ್‌ಗಳಲ್ಲಿ ಅಡ್ವೊಕೆಸಿ ಕಾರ್ಯಾಗಾರಗಳನ್ನು ನಡೆಸಲಾಗಿದೆ.

14. ಡೆಂಗೀ ಕುರಿತ Awareness Bulk Message ಗಳನ್ನು ಮೊಬೈಲ್ ನೆಟ್ ವರ್ಕ್‌ನಲ್ಲಿ ಕಳುಹಿಸಲಾಗಿದೆ.

15. ತುರ್ತು ನಿಯಂತ್ರಣ ಕ್ರಮವಾಗಿ ಪೈರಿಥ್ರಂ ಎಕ್ಸ್ ಟ್ರಾಕ್ಟ್ ಬಳಸಿ ಸಂಜೆ ವೇಳೆಯಲ್ಲಿ ಧೂಮೀಕರಣ ನಡೆಸಲಾಗುತ್ತಿದೆ.

16. ಮನೆಯ ಸುತ್ತ ಮುತ್ತಲಿನ ನೀರಿನ ಸಂಗ್ರಾಹಕಗಳಲ್ಲಿ ಲಾರ್ವಾ ನಿರ್ಮೂಲನೆಗೆ (Peri Domestic Containers) Temephos ದ್ರಾವಣವನ್ನು ಬಳಸಲಾಗುತ್ತಿದೆ.

17. ಗ್ರಾಮಗಳಲ್ಲಿನ ಖಾಯಂ ಉತ್ಪತ್ತಿ ತಾಣಗಳ ಫೋಟೋ ಆಲ್ಬಂ ಅನ್ನು ತಯಾರಿಸಿ, ಅವುಗಳ ನಿರ್ಮೂಲನೆಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುವಂತೆ ಸ್ಥಳೀಯ ಗ್ರಾಮ ಪಂಚಾಯತಿಗಳಿಗೆ ತಿಳಿಸಿ ಅನುಪಾಲನಾ ವರದಿಯನ್ನು ಪಡೆಯಲಾಗುತ್ತಿದೆ.

18. ಲಾರ್ವಾ ಕಂಡುಬಂದ ನೀರಿನ ಸಂಗ್ರಾಹಕಗಳನ್ನು ಖಾಲಿ ಮಾಡಲು ಒಪ್ಪದ ಮನೆಗಳ ಬಾಗಿಲುಗಳ ಮೇಲೆ "ಈ ಮನೆಯಲ್ಲಿ ಈಡಿಸ್ ಲಾರ್ವಾ ಹಾಗು ಸೊಳ್ಳೆ ಕಂಡು ಬಂದಿರುತ್ತದೆ" ಎಂಬ ಸ್ಟಿಕರ್ ಅನ್ನು ಅಂಟಿಸಿ ಅರಿವು ಮೂಡಿಸಲಾಗುತ್ತಿದೆ.

19. ಲಾರ್ವಾಗಳು ಕಂಡು ಬಂದ ನೀರಿನ ಸಂಗ್ರಾಹಕಗಳನ್ನು ಖಾಲಿ ಮಾಡಿಸಿದ ನಂತರ "ಈ ಮನೆಯನ್ನು ಈ ದಿನ ಈಡಿಸ್ ಲಾರ್ವಾದಿಂದ ಮುಕ್ತಗೊಳಿಸಲಾಗಿದೆ" ಎಂಬ ಸ್ಟಿಕರ್ ಅನ್ನು ಆರೋಗ್ಯ ಸಹಾಯಕರ ಸಹಿ ಹಾಗು ದಿನಾಂಕ ನಮೂದಿಸಿ ಅಂಟಿಸಲಾಗುತ್ತಿದೆ.

20. ಬೆಂಗಳೂರು ನಗರ ಜಿಲ್ಲೆಯ ವ್ಯಾಪ್ತಿಯ ವಸತಿ ಸಮುಚ್ಚಯಗಳಿಗೆ ಡೆಂಗೀ ನಿಯಂತ್ರಣ ಕುರಿತ ತಿಳುವಳಿಕೆ ಪತ್ರ ನೀಡಲಾಗಿದೆ.

21. ಬಿ.ಬಿ.ಎಂ.ಪಿ ವ್ಯಾಪ್ತಿಯಲ್ಲಿ ಲಾರ್ವಾ ನಿಯಂತ್ರಣ (source reduction), ಮಾಡಲಾಗುತ್ತಿದೆ.

22. ಡೆಂಗಿ, ಚಿಕೂನ್ ಗೂನ್ಯ ದೃಢಪಟ್ಟ ಸ್ಥಳಗಳಲ್ಲಿ ಧೂಮೀಕರಣ (fogging) ಮಾಡಲಾಗುತ್ತಿದೆ.

23. ಸ್ಥಳೀಯ ಪರಿಸರ ಅಧಿಕಾರಿಗಳಿಂದ Desilting of Major Drains, Cleaning of Surface Drains, ನೀರು ಸೊರಿಕೆ ಮತ್ತು ತಡೆಗಟ್ಟುವ ಬಗ್ಗೆ ವರದಿ ಪಡೆದು ಕ್ರಮ ಕೈಗೊಳ್ಳಲಾಗುತ್ತಿದೆ.

24. ಲಾರ್ವಾ ನಾಶಕ (source elimination) ಸಿಂಪಡಣೆ ಮಾಡಲಾಗುತ್ತಿದೆ.

25. ಪವರ್ ಸ್ಪ್ರೇ ಕಾರ್ಯಕ್ರಮವನ್ನು ದೊಡ್ಡ ಚರಂಡಿಗಳಲ್ಲಿ ವಾರಕ್ಕೊಮ್ಮೆ ಕೈಗೊಳ್ಳಲಾಗುತ್ತಿದೆ.

26. ಐ.ಯಿ.ಸಿ ಕಾರ್ಯಕ್ರಮವನ್ನು ಯತವತ್ತಾಗಿ ಮುಂದುವರಿಸಿದ್ದು, ಡೆಂಗಿ ನಿಯಂತ್ರಣದ ಬಗ್ಗೆ ಮಾಹಿತಿಯನ್ನು ಹೊರ್ಡಿಂಗ್ಸ್ ಮುಖಾಂತರ ಪ್ರದರ್ಶನ ಮಾಡಲಾಗುತ್ತಿದೆ. ಬಿತ್ತಿ ಪತ್ರ, ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುತ್ತಿದೆ. ಟಿ.ವಿ. ಮತ್ತು ರೇಡಿಯೋ ಮುಖಾಂತರ ಡೆಂಗಿ ಜ್ವರ ತಡೆಗಟ್ಟುವ ಕುರಿತು ಜಾಹಿರಾತುಗಳನ್ನು ನೀಡಲಾಗುತ್ತಿದೆ.

27. ಜ್ವರದ ವಿವರ: 6 ರೆಫೆರೆಲ್ ಆಸ್ಪತ್ರೆಗಳ ಅಡಿಯಲ್ಲಿ ಬರುವ ಜ್ವರದ ವರದಿಗಳನ್ನು ಪ್ರತಿ ನಿತ್ಯದ ವರದಿಯನ್ನು ಮಾಡಲಾಗುತ್ತಿದೆ.

28. ಆರೋಗ್ಯ ಶಿಬಿರ: ಕೊಳಚೆ ಪ್ರದೇಶಗಳಲ್ಲಿ ಮತ್ತು ಶಾಲಾ/ಕಾಲೇಜುಗಳಲ್ಲಿ ಆರೋಗ್ಯ ಶಿಬಿರ ನಡೆಸಲಾಗುತ್ತಿದೆ.

29. ಜೈವಿಕ ತಂತ್ರಜ್ಞಾನದಡಿಯಲ್ಲಿ ಕೆರೆ ಕುಂಟೆ ಬಾವಿಗಳಿಗೆ ಲಾರ್ವಾ ಮೀನುಗಳಾದ ಗಪ್ಪಿ, (Guppi) ಗ್ಯಾಂಬೂಸಿಯಾ (Gyambusia) ಮೀನುಗಳನ್ನು ಬಿಡುವ ಕಾರ್ಯಗಳನ್ನು ಮಾಡಲಾಗುತ್ತಿದೆ.

ಹಿರಿಯ ಆರೋಗ್ಯ ಪರಿವೀಕ್ಷಕರು ಡೆಂಗಿ ರೋಗವು ದೃಡಪಟ್ಟ (mac Elisa) positive cases ಮನೆಯ ಅಕ್ಕಪಕ್ಕ ಮನೆಗಳನ್ನು ಸಮೀಕ್ಷೆ ಮಾಡಿ ವರದಿಯನ್ನು ಆರೋಗ್ಯಾಧಿಕಾರಿಗಳ ಮುಖೇನ ಜಂಟಿ ಆಯುಕ್ತರು (ಆರೋಗ್ಯ)ರವರಿಗೆ ಮಾಹಿತಿಯನ್ನು ವಾರಕೊಮ್ಮೆ ನೀಡಲಾಗುತ್ತಿದೆ.

ಅನುಬಂಧ–3

ಇವುಗಳನ್ನು ನಿಯಂತ್ರಿಸಲು ಸರ್ಕಾರ ಕೈಗೊಂಡ ಪರ್ಯಾಯ ವ್ಯವಸ್ಥೆ ಈ ಕೆಳಗಿನಂತಿವೆ.

1. ಡೆಂಗಿ ಹರಡುವ ಈಡೀಸ್ ಸೊಳ್ಳೆಗಳ ಉತ್ಪತ್ತಿ ತಾಣಗಳ ಸಮೀಕ್ಷೆ ಮತ್ತು ನಿರ್ಮೂಲನೆ ಕಾರ್ಯಗಳನ್ನು ರಾಜ್ಯಾದ್ಯಂತ ಕೈಗೊಳ್ಳಲಾಗುತ್ತಿದೆ.
2. ಈ ರೋಗದ ಪತ್ತೆಗೆ ಸೆಂಟಿನಲ್ ಪ್ರಯೋಗಾಲಯಗಳಲ್ಲಿ ವ್ಯವಸ್ಥೆ ಮಾಡಲಾಗಿದೆ.
3. ಎಲ್ಲಾ ಜಿಲ್ಲೆಗಳಿಗೆ ಕೀಟನಾಶಕ ದ್ರಾವಣ ಮತ್ತು ಫಾಗಿಂಗ್ ಯಂತ್ರಗಳನ್ನು ಪೂರೈಸಲಾಗಿದೆ.
4. ಆರೋಗ್ಯ ಶಿಕ್ಷಣ ಚಟುವಟಿಕೆಗಳನ್ನು ಕೈಗೊಳ್ಳಲಾಗುತ್ತಿದೆ.
5. ಎಲ್ಲಾ ಸರ್ಕಾರಿ ಆಸ್ಪತ್ರೆಗಳಲ್ಲಿ ಜ್ವರ ಪ್ರಕರಣಗಳಿಗೆ ಉಚಿತವಾಗಿ ಚಿಕಿತ್ಸೆ ಮತ್ತು ನಿರ್ವಹಣೆಗೆ ವ್ಯವಸ್ಥೆ ಮಾಡಲಾಗಿದೆ.
6. ಬಿ.ಬಿ.ಎಂ.ಪಿ ವತಿಯಿಂದ ಡೆಂಗಿ ನಿಯಂತ್ರಣದ ಬಗ್ಗೆ ಮಾಹಿತಿಯನ್ನು ಹೊರ್ಡಿಂಗ್ಸ್ ಮುಖಾಂತರ ಪ್ರದರ್ಶನ ಮಾಡಲಾಗುವುದು, ಬಿತ್ತಿ ಪತ್ರ, ಕರಪತ್ರಗಳನ್ನು ಸಾರ್ವಜನಿಕರಿಗೆ ವಿತರಿಸಲಾಗುವುದು, ಟಿ.ವಿ. ಮತ್ತು ರೇಡಿಯೋ ಮುಖಾಂತರ ಡೆಂಗ್ಯೂ ಜ್ವರ ತಡೆಗಟ್ಟುವ ಕುರಿತು ಜಾಹಿರಾತುಗಳನ್ನು ನೀಡಲಾಗುತ್ತಿದೆ.
7. ಸರ್ಕಾರಿ ಆಸ್ಪತ್ರೆಗಳ ವೈದ್ಯರಿಗೆ ಡೆಂಗೀ ಪ್ರಕರಣಗಳ ನಿರ್ವಹಣೆ ಕುರಿತ WHO Protocol ಗಳನ್ನು ನೀಡಿ ತರಬೇತಿ ನೀಡಲಾಗಿದೆ.

8. ಶಂಕಿತ ಡೆಂಗೀ ಪ್ರಕರಣಗಳಲ್ಲಿ ಅವಶ್ಯವಿರುವ Torniquet Test & Platelet Count ಗಳನ್ನು ಪ್ರಾಥಮಿಕ ಆರೋಗ್ಯ ಕೇಂದ್ರ ಮಟ್ಟದಲ್ಲಿಯೇ ಮಾಡಲಾಗುತ್ತಿದೆ

9. Platelet ಲಭ್ಯತೆಯ ಕುರಿತು blood.kar.nic.in ವೆಬ್ ಸೈಟ್‌ನಲ್ಲಿರುವ ಮಾಹಿತಿಯನ್ನು ಪ್ರತಿದಿನವೂ ಸರ್ಕಾರಿ ಆಸ್ಪತ್ರೆಗಳಿಗೆ ನೀಡಲಾಗುತ್ತಿದೆ.

10. ತಾಲ್ಲೂಕು ಆಸ್ಪತ್ರೆಯ ವಾರ್ಡುಗಳಲ್ಲಿ ಸೊಳ್ಳೆಪರದೆ ಹಾಗು ಸೊಳ್ಳೆ ನಿಯಂತ್ರಕ ಜಾಲರಿಗಳನ್ನು ಅಳವಡಿಸಲಾಗಿದೆ.

ಶಂಕಿತ ಪ್ರಕರಣಗಳು ಅವಶ್ಯವಾಗಿ ಸರ್ಕಾರಿ ಆಸ್ಪತ್ರೆಗಳಲ್ಲಿಯೇ ಅಗತ್ಯ ಚಿಕಿತ್ಸೆ ಪಡೆಯುವಂತೆ ಗ್ರಾಮ ಮಟ್ಟದಲ್ಲಿ ನಡೆಯುವ ಅಡ್ಡೊಕೆಸಿ ಸಭೆಗಳಲ್ಲಿ ಗ್ರಾಮಸ್ಥರಿಗೆ ತಿಳಿಸಲಾಗುತ್ತಿದೆ.

ಜಾತಿಗಣತಿ

538(513); ಶ್ರೀ ಗೋಪಾಲಯ್ಯ ಕೆ. (ಮಹಾಲಕ್ಷ್ಮೀ ಲೇಔಟ್)

ಅ) ರಾಜ್ಯದಲ್ಲಿನ ಎಲ್ಲ ವರ್ಗದ ಆರ್ಥಿಕ, ಸಾಮಾಜಿಕ ಮತ್ತು ಶೈಕ್ಷಣಿಕ ಸ್ಥಿತಿಗತಿ ತಿಳಿಯಲು ಜಾತಿಗಣತಿ ನಡೆಸಲಾಗಿದೆಯೇ;

ಆ) ಜಾತಿ ಗಣತಿ ಯಾವಾಗ ಪ್ರಾರಂಭವಾಯಿತು ಹಾಗೂ ಯಾವಾಗ ಪೂರ್ಣಗೊಂಡಿದೆ;

ಇ) ಇದಕ್ಕಾಗಿ ನಿಯೋಜಿಸಲಾಗಿದ್ದ ಸಿಬ್ಬಂದಿ ಎಷ್ಟು; ಇಲ್ಲಿಯವರೆಗೆ ಖರ್ಚಾದ ಹಣವೆಷ್ಟು;

ಈ) ಜಾತಿ ಗಣತಿಯ ಪೂರ್ಣ ಪ್ರಮಾಣದ ವರದಿ ಯಾವಾಗ ಸಿದ್ಧವಾಗುವುದು;

ಉ) ಜಾತಿ ಗಣತಿ ವರದಿ ಬಂದ ನಂತರ ಸರ್ಕಾರ ಕೈಗೊಳ್ಳಲಿರುವ ಕ್ರಮಗಳೇನು?